# ನಿಮ್ಮೊಡನೆ

## ಇವನಾರವ ಇವನಾರವ ಎಂದೆನಿಸದಿರಿ

**ಸಾಮಾಜಿಕ ಬಹಿಷ್ಕಾರವನ್ನು ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸಿ ರಾಜ್ಯ ಸರ್ಕಾರ ಮಸೂದೆ ಸಿದ್ಧಪಡಿಸಿದೆ. ಈ ಚಳಿಗಾಲದ ಅಧಿವೇಶನದಲ್ಲಿ ಮಂಡನೆ ಸಂಭವ ಎನ್ನಲಾಗಿದೆ. ಇದು ಸಾಧ್ಯವಾಗಲೇಬೇಕು. ಗೌರವದ ಬದುಕು ಎಲ್ಲರ ಮೂಲ ಹಕ್ಕು. ಅದನ್ನು ಕಾನೂನು ಕಾಯ್ದೆಗಳ ಮೂಲಕ ನೀಡಬೇಕಿರುವುದು ದುರಂತ.**

ವರ್ಗರಹಿತ ಮತ್ತು ವರ್ಣರಹಿತ ಸಮಾಜದ ಕಲ್ಪನೆ ಕರ್ನಾಟಕಕ್ಕೆ ಹೊಸದೇನಲ್ಲ. ಹನ್ನೆರಡನೆಯ ಶತಮಾನದಿಂದಲೂ ಈ ಗುರಿ ಸಾಧನೆಗಾಗಿ ಸಾಮಾಜಿಕ ಚಳವಳಿಗಳು ಆಗುತ್ತಲೇ ಇವೆ. ಆದರೂ ಅಸ್ಪೃಶ್ಯತನ, ಜಾತಿ ಸಂಘರ್ಷ, ಮರ್ಯಾದೆಗೇಡು ಹತ್ಯೆ ಇವೆಲ್ಲವೂ ನಮ್ಮ ಸಮಾಜದ ಹಿಮ್ಮುಖ ಚಲನೆಯನ್ನು ತೋರಿಸುತ್ತಲೇ ಇವೆ.

ನೆರೆಯ ರಾಜ್ಯ ಮಹಾರಾಷ್ಟ್ರದಲ್ಲಿ ಸಾಮಾಜಿಕ ಬಹಿಷ್ಕಾರ ನಿಷೇಧ ಕಾಯ್ದೆ ಜಾರಿಗೆ ಬಂದು 9 ವರ್ಷಗಳೇ ಕಳೆದುಹೋಗಿವೆ. ನಮ್ಮಲ್ಲಿ ಈಗಲೂ ರಥ ಮುಟ್ಟಿದನೆಂದು ಬಾಲಕನಿಗೆ ಹಿಗ್ಗಾಮುಗ್ಗಾ ಥಳಿಸುವುದು, ದಲಿತರ ಹೆಣ್ಣುಮಕ್ಕಳಿಗೆ ಅವಮಾನಿಸುವುದು, ಜಾತಿ ಕಾರಣದಿಂದಾಗಿಯೂ ಊರ ಹೊರಗಿಡುವುದು, ಸಾಮುದಾಯಿಕವಾಗಿ ಥಳಿಸುವುದು ನಡೆದೇ ಇದೆ. ಬಹಿಷ್ಕಾರ ನಿಷೇಧವನ್ನು ಕಾನೂನಾತ್ಮಕವಾಗಿಯೇ ಜಾರಿಗೆ ತರಬೇಕಾದುದು ಬಲು ಹಿಂದೆಯೇ ಆಗಬೇಕಾಗಿತ್ತು.

ದೇಗುಲ ಪ್ರವೇಶ, ಕ್ಷೌರ ನಿರಾಕರಣೆ, ಕುಡಿಯುವ ನೀರಿನ ನಿರಾಕರಣೆ, ಅಂತ್ಯಕ್ರಿಯೆಗೆ ನಿರಾಕರಣೆ, ಹೋಟೆಲ್‌ಗಳಲ್ಲಿ ಪ್ರತ್ಯೇಕ ವ್ಯವಸ್ಥೆ ಅಥವಾ ಸೇವೆ ನಿರಾಕರಣೆ ಇವೆಲ್ಲವೂ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಇಂದಿಗೂ ಜೀವಂತವಾಗಿವೆ. ಭಿನ್ನ ಜಾತಿಯೊಂದಿಗೆ ‘ಸಂಘರ್ಷ’ ಬೇಡವೆಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೂ ಅಲ್ಲಲ್ಲಿ ಹೊಂದಿಕೊಂಡು ಹೋಗಿದ್ದಾರೆ. ಹೋಗುತ್ತಿದ್ದಾರೆ. ಅಲ್ಲಲ್ಲಿ ಥಳಿತವಾದಾಗ, ಮಾತು ತುಟಿ ಮೀರಿದಾಗಷ್ಟೆ ಕೆಲವು ಪ್ರಕರಣಗಳು ಬೆಳಕು ಕಂಡಿವೆ. ಇಲ್ಲದಿದ್ದರೆ ಹಲವಾರು ಕಡೆ ಇದೆಲ್ಲವೂ ಸಹಜವೆಂಬಂತೆಯೇ ಬದುಕು ನಡೆದುಕೊಂಡು ಬರುತ್ತಿದೆ.

ತಮ್ಮ ಮಕ್ಕಳಿಗೆ ಮನೆಯಲ್ಲಿಯೇ ಕ್ಷೌರ ಮಾಡುವುದು, ಹೋಟೆಲ್‌ಗಳಿಗೆ ಹೋಗದೇ ಇರುವುದು, ಪೇಟೆಗೆ ಹೋಗಿ ತಮ್ಮ ಕ್ಷೌರ ಮಾಡಿಕೊಳ್ಳುವುದು, ದೇಗುಲಗಳಿಂದ ದೂರ ಉಳಿಯುತ್ತಾ ಪರಿಸ್ಥಿತಿಗೆ ಹೊಂದಿಕೊಳ್ಳುತ್ತಲೇ ದಿನ ನೂಕುತ್ತಿದ್ದಾರೆ. ಇಂಥ ಪರಿಸ್ಥಿತಿಗೆ ತಂದಿರುವುದು ನಮ್ಮದೇ ಸಮಾಜದ ಚೌಕಟ್ಟು. ಅವನ್ನೆಲ್ಲ ನೋಡಿಯೂ ಸುಮ್ಮನಿರುವ, ಏನೂ ನಡೆದೇ ಇಲ್ಲವೆಂಬಂತೆ ದೈನಂದಿನದ ಬದುಕು ಸಾಗುತ್ತಿರುವುದು ದುರಂತ. ಅಸ್ಪೃಶ್ಯತೆಯನ್ನು ಕಾನೂನಾತ್ಮಕವಾಗಿ ನಿಷೇಧಿಸದಿದ್ದರೆ ಗ್ರಾಮೀಣ ಜೀವನದಲ್ಲಿ ಅಷ್ಟೇ ಅಲ್ಲ, ಔದ್ಯೋಗಿಕ ಕ್ಷೇತ್ರಗಳಲ್ಲಿಯೂ ಇಂಥವೆಲ್ಲ ನುಸುಳಿವೆ. ಢಾಳಾಗಿ ಕಾಣದಿದ್ದರೂ ತೆರೆಯ ಮರೆಯಲ್ಲಿ ಎಲ್ಲವೂ ವರ್ಗ ಮತ್ತು ವರ್ಣ ಸಂಘರ್ಷಗಳ ಅಡಿಯಲ್ಲಿಯೇ ನಲುಗುವಂತಾಗುತ್ತದೆ.

ಪ್ರತಿ ವ್ಯಕ್ತಿಗೂ ತನ್ನದೇ ಆದ ಗೌರವವನ್ನು ನೀಡದಿದ್ದಲ್ಲಿ, ವೃತ್ತಿಗೌರವವನ್ನು ಕಲಿಸದಿದ್ದರೆ, ಮಕ್ಕಳಲ್ಲಿ ಜಾತಿ ಮತ್ತು ವರ್ಗಗಳ ಪ್ರಜ್ಞೆಯ ನಂತರವೂ ಜನರನ್ನು ಇದ್ದಂತೆಯೇ ಸ್ವೀಕರಿಸುವುದೇ ಶಿಕ್ಷಣವಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪರಸ್ಪರ ಗೌರವವನ್ನು ಹೇಳಿಕೊಡದೇ ಇದ್ದಲ್ಲಿ, ಮುಂದಿನ ತಲೆಮಾರು ಈ ಪದ್ಧತಿಯಿಂದ ಸಮಾಜದೊಳಗೆ ಎರಡು ದಪ್ಪಗೆರೆಯನ್ನು ಎಳೆಯುತ್ತಲೇ ಹೋಗುತ್ತದೆ.

ಇಂದಿನ ತಲೆಮಾರು ಮೇಲರಿಮೆ ಮತ್ತು ಕೀಳರಿಮೆಗಳ ಸುಳಿಯಲ್ಲಿಯೇ ಕಳೆದುಹೋಗಿರುವಾಗ ಆಳುವ ಗುಣ, ಆಳಿಸಿಕೊಳ್ಳುವ ಋಣ ಎರಡೂ ಮರೆಯುತ್ತಲೇ ಹೋಗುತ್ತವೆ. ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳಾಗಿ ಹೋದವು. ಸಂವಿಧಾನ ಬಂದು ಇಷ್ಟು ವರ್ಷಗಳಾದವು. ವಚನಕ್ರಾಂತಿ ನಡೆದು, ಶರಣರ ಚಳವಳಿಯಾಗಿ ಶತಕಗಳೇ ಕಳೆದುಹೋದವು.

ಈಗಲೂ ಮನುಷ್ಯನ ಹುಟ್ಟಿನಿಂದಾಗಿ ಅವರನ್ನು ಥಳಿಸುವುದು, ದೂರ ಇಡುವುದು, ಬಹಿಷ್ಕರಿಸುವುದು ಮುಂತಾದ ಕೃತ್ಯಗಳಲ್ಲಿ ತೊಡಗುತ್ತಿರುವ ಸಮಾಜದಲ್ಲಿ ನಾವು ಬದುಕುತ್ತಿರುವುದೇ ಅಕ್ಷಮ್ಯ. ಇಂಥ ಕೃತ್ಯಗಳನ್ನು ವಿರೋಧಿಸದೇ ಇರುವುದೂ ಅಪರಾಧದಲ್ಲಿ ಪಾಲ್ಗೊಂಡಷ್ಟೇ ಗುರುತರವಾದುದು.

ಮಹಾರಾಷ್ಟ್ರ ಸರ್ಕಾರವು ಕಾಯ್ದೆಯನ್ನು ತಂದ ನಂತರವೂ ಅಲ್ಲಿ ಇಂಥ ಘಟನೆಗಳು ಆಗಿವೆ. ಆದರೆ ಘಟನೆಯ ತೀವ್ರತೆ ಕಡಿಮೆಯಾಗಿದೆ. ಸಂಖ್ಯೆಗಳಲ್ಲಿ ಕಡಿಮೆಯಾಗಿವೆ. ಅರಿವಿನಿಂದಾಗದ ಬದಲಾವಣೆ ಆತಂಕದಿಂದಲಾದರೂ ಆಗಲಿ ಎಂಬ ಆಶಯ ಕಠಿಣ ಶಿಕ್ಷೆಗಳಿಗೆ ಇರುತ್ತದೆ. ಮೇಲರಿಮೆಯಿಂದ ಉಳಿದ ಜೀವಗಳನ್ನು ಅವಮಾನಿಸುವವರಿಗೂ ಇಂಥ ಕಠಿಣ ಶಿಕ್ಷೆಯ ಕುರಿತ ಭಯ ಮೂಡಲಿ. ಆ ಭಯದಿಂದಲಾದರೂ ಇಂಥ ಕೃತ್ಯಗಳಿಂದ ದೂರ ಉಳಿಯಲಿ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರೂ ಇಂಥ ಅನ್ಯಾಯಗಳಿಗೆ ಒಳಪಟ್ಟಾಗ ಪೊಲೀಸರಲ್ಲಿ ಪ್ರಕರಣ ದಾಖಲಿಸಲಿ. ದಮನಿತರ ಧ್ವನಿ ಜೋರಾದಷ್ಟೂ ಶೋಷಕರ ಕೈಗಳು ಬಲಹೀನವಾಗುತ್ತವೆ. ಶಿವಶರಣರ ವಚನಗಳು ಇಂಥ ಭೇದಭಾವಗಳನ್ನು ಸ್ಪಷ್ಟವಾಗಿಯೇ ವಿರೋಧಿಸಿದ್ದಾರೆ. ಅಲ್ಲಗಳೆದಿದ್ದಾರೆ. ಅವುಗಳಿಗೆ ಪರಿಹಾರವನ್ನೂ ಸೂಚಿಸಿದ್ದಾರೆ. ಇವನಾರವ ಇವನಾರವ ಇವನಾರವನೆಂದೆನಿಸದಿರಯ್ಯ, ಇವ ನಮ್ಮವ, ಇವ ನಮ್ಮವ, ಇವ ನಮ್ಮವನೆಂದೆನಿಸಿರಯ್ಯ ಎಂಬ ಎರಡು ಸಾಲುಗಳು, ಕಳಬೇಡ ಕೊಲಬೇಡ ವಚನ ಪರಸ್ಪರ ಗೌರವವನ್ನು ಹೇಳಿಕೊಡುತ್ತದೆ. ಇಂಥವು ನಮ್ಮ ಬದುಕಿನ ಸೂತ್ರಗಳಾಗಬೇಕು. ಜೀವನ ಮಂತ್ರವಾಗಬೇಕು. ಈ ಕಾಯ್ದೆ ಜಾರಿಗೆ ಬಂದು ಅಸ್ಪೃಶ್ಯತನ ಇತಿಹಾಸವಾಗಬೇಕು.

■ **ರಶ್ಮಿ ಎಸ್**




ವಿಜಯ